ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 6, January-February 2023, Pp. 71-75
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಜನಪದ ಮತ್ತು ವಚನಕಾರರ ಲೋಕದೃಷ್ಟಿ

**ಪ್ರವೀಣ್‌ಕುಮಾರ್.ಎಮ್.ಸಿ***

*ಸಂಶೋಧನಾ ವಿದ್ಯಾರ್ಥಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

***Abstract:***

*ಜನಪದರು ಮತ್ತು ವಚನಕಾರರ ಮುಖ್ಯ ಉದ್ದೇಶ ಸಾಹಿತ್ಯ ರಚನೆಯಲ್ಲ. ಜನಪದರು ತಮ್ಮ ಆಯಾಸವನ್ನು ಮರೆಯಲು ಹಾಡುಗಳನ್ನು ಸೃಷ್ಟಿದರೆ ವಚನಕಾರರು ತಮ್ಮ ಅಂತರಂಗದ ವಿಕಾಸ ಮತ್ತು ಆತ್ಮೋದ್ಧಾರಕ್ಕಾಗಿ ಅಭಿವ್ಯಕ್ತಿ ಮಾರ್ಗವನ್ನು ಕಂಡುಕೊಂಡರು. ಅದುವೇ ಮುಂದೆ ವಚನಸಾಹಿತ್ಯವಾಗಿ ಓದಿಗೆ ಆಕರವಾಗಿದೆ. ವಚನ ಮತ್ತು ಜನಪದ ಸಾಹಿತ್ಯ ಪ್ರಕಾರಗಳ ಅಭಿವ್ಯಕ್ತಿ ಸ್ವರೂಪ ಬೇರೆಬೇರೆಯಾಗಿದ್ದರೂ ಆಳದಲ್ಲಿ ಸ್ವಾಸ್ಥ್ಯ ಸಮಾಜವನ್ನು ನಿರ್ಮಿಸುವುದು ಅವುಗಳ ಉದ್ದೇಶವಾಗಿದೆ. ಈ ಹಿನ್ನೆಲೆಯಲ್ಲಿ ಅವರೆಡರ ಮಧ್ಯೆ ಸಾಮ್ಯತೆ ಇರುವುದನ್ನು ಗುರುತಿಸಬಹುದು. ಜನಪದ ಮತ್ತು ವಚನಗಳ ನಡುವೆ ಕೊಡು-ಕೊಳ್ಳು ಪ್ರಕ್ರಿಯೆ ನಿರಂತರವಾಗಿ ನಡೆದಿದೆ. ಬದುಕಿನ ಪ್ರತಿಯೊಂದು ಅನುಭವಗಳು ವಚನಗಳಲ್ಲಿ ಮತ್ತು ಜನಪದರ ಅಭಿವ್ಯಕ್ತಿಯಲ್ಲಿ ಅಕ್ಷರರೂಪ ತಾಳಿ ಸಾಹಿತ್ಯ ಸುಗಂಧ ಎಲ್ಲೆಡೆ ಪಸರಿಸಿದೆ. ಪ್ರಸ್ತುತ ಲೇಖನದಲ್ಲಿ ಜನಪದರು ಮತ್ತು ವಚನಕಾರರ ಲೋಕದೃಷ್ಟಿಯ ಬಗ್ಗೆ ವಿವರಿಸಲಾಗಿದೆ.*

**Keywords:** *ಜಾನಪದ, ಮೌಖಿಕ ಸಾಹಿತ್ಯ, ಶಿಷ್ಟ ಸಾಹಿತ್ಯ, ವಚನ ಸಾಹಿತ್ಯ, ವಚನಕಾರರು, ಲೋಕದೃಷ್ಟಿ.*

**ಪೀಠಿಕೆ**

ಜನಪದರು ಮತ್ತು ವಚನಕಾರರು ಭಾವನೆಗಳನ್ನು ಕಲಾತ್ಮಕಗೊಳಿಸಲು ಹೊರಟ ಕವಿಗಳಲ್ಲ, ಬದುಕನ್ನು ಕಲಾತ್ಮಕಗೊಳಿಸಲು ಹೋರಾಡಿದ ಮಹಾನ್ ಸಂತರು. ಈ ಉತ್ಕಟವಾದ ಹೋರಾಟದ ಉಪನಿಷತ್ತಿನ ಪ್ರತೀಕವೇ ವಚನ ಸಾಹಿತ್ಯದ ಸೃಷ್ಟಿ. ಇದರ ವಚನಗಳ ಮೂಲ ಆಶಯ ಸಾಹಿತ್ಯ ಸಾಧನೆಯಲ್ಲ, ಜೀವನ ಶೋಧನೆ. ಜೀವನಕ್ಕಾಗಿ ಅವರು ಸಾಹಿತ್ಯವನ್ನು ಅವಲಂಬಿಸಿದವರು. ವೃಷ್ಟಿ ಜೀವನದಂತೆ ಸಮಷ್ಟಿ ಜೀವನದ ಒಳಿತನ್ನೂ ಅವರ ತೀವ್ರವಾದ ಅಭೀಪ್ಸೆ ಒಳಗೊಂಡಿತ್ತು. ಸಂಪ್ರದಾಯದ ಮತ್ತು ಪರಂಪರೆಯ ಜೀವಸತ್ವವನ್ನು ಅರಗಿಸಿಕೊಂಡು, ಸಾರ್ವಕಾಲಿಕ ಸತ್ಯವಾದ ವೈಜ್ಞಾನಿಕ ಮೌಲ್ಯಗಳ ಮೇಲೆ ಮಾನವ ಧರ್ಮದ ಸೌಧವನ್ನು ನಿರ್ಮಿಸಲು ಹವಣಿಸಿದರು. ಸಂಪ್ರದಾಯದ ಮಿತಿಯ ಪರಿಮಿತಿಯನ್ನೂ ಮೀರಿ ವೈಚಾರಿಕ ನೆಲಗಟ್ಟಿನ ಮೇಲೆ ಸಾರ್ವಕಾಲಿಕವಾದ ವಿಶ್ವಮಾನವ ಪ್ರಜ್ಞೆಯ ಅರಿವು ಮೂಡಿಸಿದವರು. ಅವರು ಆಲೋಚಿಸಿದುದು ವಿಶ್ವಮಾನವರಾಗಿ, ವಿಶ್ವಮಾನವರಿಗಾಗಿ! ಹಾಗೆಂದು ನಿಂತ ನೆಲವನ್ನು ಬಿಟ್ಟು ಆಕಾಶದಲ್ಲಿ ವಿಹರಿಸುವ

**Please cite this article as:** ಪ್ರವೀಣ್‌ಕುಮಾರ್ ಎಮ್. ಸಿ (2023). ಜನಪದ ಮತ್ತು ವಚನಕಾರರ ಲೋಕದೃಷ್ಟಿ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 1(6), 71–75.

ಆದರ್ಶವಾದಿಗಳಾಗಲಿಲ್ಲ. ಈ ಮಣ್ಣಿನ ಮಕ್ಕಳಾಗಿ, ಈ ಮಣ್ಣಿನಲ್ಲಿ ಬೆಳೆದು, ಈ ಮಣ್ಣನ್ನೇ ಹೊನ್ನಾಗಿಸಿದವರು. ಹಳೆಯ ಕೊಳೆಯನ್ನು ನಿರ್ದಾಕ್ಷಿಣ್ಯವಾಗಿ ಕತ್ತರಿಸಿಹಾಕಿ ಅದನ್ನು ಗೊಬ್ಬರದಿಂದ ಬಯಸಿ ಬಂದವರಿಗೆಲ್ಲ ಹೊಸ ಬೆಳೆಯ ಅಮೃತದ ಸುಧೆಯನ್ನಿತ್ತವರು. ಜಗತ್ತಿನ ಯಾವುದೇ ಕ್ರಾಂತಿಯ ಪರಮ ಗಂತವ್ಯವೆಂದರೆ ಇದೆ. ಸಮಷ್ಟಿ ಜೀವನದ ಉತ್ಥಾನ. ಇದನ್ನು ವೈಚಾರಿಕ ನಿಲುವಿನಲ್ಲಿ ಶರಣರು ಸಾಧಿಸಿದ ರೀತಿ ಜಾಗತಿಕ ಧರ್ಮದ ಇತಿಹಾಸದಲ್ಲಿಯೇ ಅನ್ಯಾದೃಷ್ಯವಾದುದು.

ಜನಪದ ಎಂದರೆ ಜನಾಂಗ, ದೇಶ ಎಂಬರ್ಥವಿದೆ. ಒಂದು ನಿರ್ದಿಷ್ಟ ಪ್ರದೇಶದಲ್ಲಿ ವಾಸಿಸುವ ಜನಾಂಗದ ಸಮಸ್ತ ಬದುಕಿನ ಇತಿಹಾಸವನ್ನು ಮೌಖಿಕವಾಗಿ ಅಭ್ಯಾಸ ಮಾಡುವುದೇ ಜಾನಪದ ಆಗಿದೆ. ಈ ಹಿನ್ನೆಲೆಯಲ್ಲಿ ಗಮನಿಸುವುದಾದರೆ, ಎಲ್ಲ ವಚನಕಾರರು ಜನಪದರೇ ಆಗಿದ್ದಾರೆ. ಅವರು ಬರೆದ ಸಮಸ್ತ ವಚನಗಳು ಸಹ ಜಾನಪದದ ಪ್ರಭಾವ–ಪ್ರೇರಣೆಯಿಂದಲೇ ಹುಟ್ಟುಪಡೆದಿವೆ. ಶಿಷ್ಟ–ಜಾನಪದ ಎಂಬುವು ಅಧ್ಯಯನದ ಅನುಕೂಲಕ್ಕಾಗಿ ಮಾಡಿಕೊಂಡ ಯಾಂತ್ರಿಕ ಕ್ರಮಗಳು ಅಷ್ಟೇ. ಆದರೆ ಅವರೆಡರ ನಡುವಿನ ಸಂಬಂಧ ಮಾತ್ರ ಪರಸ್ಪರ ಪೂರಕ ಮತ್ತು ಪ್ರೇರಕವಾಗಿವೆ. ಒಂದನ್ನೊಂದು ಬಿಟ್ಟು ಇರಲು ಸಾಧ್ಯವೂ ಇಲ್ಲ, ಅಸ್ತಿತ್ವವೂ ಇಲ್ಲ. ಅವರೆಡನ್ನೂ ಸಮನ್ವಯಗೊಳಿಸಿ ಅಧ್ಯಯನ ಮಾಡುವ ಅಂತರಶಿಸ್ತೀಯ ಕ್ರಮ ಭಾಷೆ, ಸಾಹಿತ್ಯ, ಮೌಲ್ಯಗಳ ದೃಷ್ಟಿಯಿಂದ ಮಹತ್ವದ್ದಾಗಿದೆ. ಶಿಷ್ಟ ಸಾಹಿತ್ಯದಲ್ಲಿರುವ ಹಾಗೇ ಜಾನಪದದಲ್ಲೂ ಅನೇಕ ಪ್ರಕಾರಗಳಿವೆ; ಜನಪದ ಸಾಹಿತ್ಯವೂ ಕತೆ, ಹಾಡು, ಗಾದೆ. ಒಗಟು ಇತ್ಯಾದಿ ಪ್ರಕಾರಗಳಲ್ಲಿ ಹಬ್ಬಿ ಹರಡಿಕೊಂಡಿರುವುದು ಗಮನಾರ್ಹ (ಸಂಗಮೇಶ ಎಸ್. ಗಣಿ, 2020)

'ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ' ಎಂದು ಕೇಳುವ ಬಸವಣ್ಣನವರ ಮಾತಾಗಲಿ, ಅಜ್ಞಾನವೆಂಬ ತೊಟ್ಟಿಲೊಳಗೆ ಜ್ಞಾನವೆಂಬ ಶಿಶುವ ಮಲಗಿಸಿ. ಎಂದು ಕೇಳುವ ಅಲ್ಲಮನ ಮಾತುಗಳನ್ನು ಪರಿಭಾವಿಸಿದಾಗ, ವಚನಕಾರರು ಸಾಹಿತ್ಯದ ಪರಿಧಿಯಲ್ಲೇ ಮನೋವಿಜ್ಞಾನಿಗಳಾಗಿ ಆದಿಭೌತ ವಿಜ್ಞಾನಿಗಳಾಗಿ, ಜೀವ ವಿಜ್ಞಾನಿಗಳಾಗಿ, ವೈದ್ಯ, ಗಣಿತ, ಖಗೋಲ, ಕೃಷಿ, ವಿಜ್ಞಾನಿಗಳಾಗಿ ತೋರಿದುದು ಅಚ್ಚರಿಯನ್ನುಂಟುಮಾಡುತ್ತದೆ. ಈ ಎಲ್ಲ ಮೌಲ್ಯ ವಿವೇಚನೆಯ ಉದ್ದಕ್ಕೂ ಆಚಾರ ವಿಚಾರಗಳ ಈ ಸಮನ್ವಯ ನಿಷ್ಠೆ ಅಚಲವಾಗಿ ಕಂಡುಬರುತ್ತದೆ. ವಿಚಾರಗಳ ನಿಲುವಿನಲ್ಲಿ ಬಹಳ ಅದ್ಭುತವಾಗಿದ್ದರೂ ಆಚಾರದಲ್ಲಿಳಿದು ಜನತೆಯನ್ನು ಮುಟ್ಟದೇ ಹೋದಾಗ, ಅದು ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತದೆ. ಹಾಗೆಯೇ ವಿಚಾರಗಳ ಬೆಂಬಲವಿಲ್ಲದೇ ಆಚಾರಗಳು, ಕೇವಲ ಯಾಂತ್ರಿಕವಾಗಿ ಆಡಂಬರವಾಗಿ ಶೋಷಣೆಯ ಸಾಧನಗಳಾಗುತ್ತವೆ. ಇದನ್ನು ಮನಗಂಡ ಶರಣರು, ಇವುಗಳ ಅವಿನಾಸಂಬಂಧವನ್ನು ತಮ್ಮ ಮೌಲ್ಯವಿವೇಚನೆಯ ಉದ್ದಕ್ಕೂ ಎತ್ತಿ ಹಿಡಿದರು. ಇವುಗಳಲ್ಲಿ ಯಾವೊಂದರ ಕೊರತೆಯಾದರೂ ಅಷ್ಟರ ಮಟ್ಟಿಗೆ ಆಚಾರಗಳಾಗಲಿ ವಿಚಾರಗಳಾಗಲಿ ಕುಂಟುತ್ತವೆ. ಇಲ್ಲವೇ ಕುರುಡಾಗುತ್ತವೆ.

ಜಾನಪದ ಎನ್ನುವಂಥದ್ದು ಪರಂಪರಾಗತವಾದ ಹರಳುಗಟ್ಟಿದ ವಿವೇಕ ಮತ್ತು ಅನುಭವ. ದೇಶೀಯ ಜ್ಞಾನ ಪರಂಪರೆಯನ್ನು ಈ ನಾಡಿನಲ್ಲಿ ಬೆಳೆಸಿ ಉಳಿಸಿಕೊಂಡು ಬಂದವರು. ಪ್ರತಿಯೊಂದು ಜಾನಪದಕ್ಕೆ ತನ್ನದೇ ಆದ ತೇಜಸ್ಸು ಹಾಗೂ ಪ್ರತಿಭೆಯನ್ನು ಹೊಂದಿರುತ್ತದೆ. ಪ್ರತಿಯೊಂದು ಜಾನಪದವು ತನ್ನದೇ ಆದ ಧೋರಣೆಗಳನ್ನು ಚಿಂತನೆಗಳನ್ನು ನಡವಳಿಕೆಗಳ ಭಾಷೆ ಹೊಂದಿರುತ್ತದೆ. ಪ್ರತಿಯೊಂದು ಅಂಶವು ಒಂದೊಂದು ಸೃಷ್ಟಿಯು ಪ್ರತಿ ಸೃಷ್ಟಿಯು ಮಹತ್ವಪೂರ್ಣವಾದದ್ದು. ಒಂದರ ಸೃಷ್ಟಿ ಮತ್ತೊಂದರ ಸೃಷ್ಟಿಗೆ ಕಡಿಮೆಯಲ್ಲ. ದಲಿತ ಜಾನಪದ ಸೃಷ್ಟಿ, ಬ್ರಾಹ್ಮಣ, ಲಿಂಗಾಯತ, ಒಕ್ಕಲಿಗ

ಇನ್ನಾವುದೇ ಜನಪದ ಸೃಷ್ಟಿ ಮತ್ತು ದೃಷ್ಟಿಯಿಂದಲೇ ಪ್ರತಿ ಜಾನಪದ ತನ್ನದೇ ಆದ ತೇಜಸ್ಸು ಮತ್ತು ಪ್ರತಿಭೆಯನ್ನು ಪಡೆದಿದೆ.

ಸಂಸ್ಕೃತಿಯು ಮಾನವಶಾಸ್ತ್ರಗಳಿಗೆ ಮೂಲ ಆಧಾರ. ಜಾನಪದ ಸಹ ಜನಸಂಸ್ಕೃತಿಯ ಒಂದು ಅಧ್ಯಯನವಾಗಿದೆ. ಇದು ಯಾವುದೇ ವರ್ಗ, ವರ್ಣ, ಜಾತಿಗೆ ಸೀಮಿತವಾದ ಸಂಸ್ಕೃತಿಯ ಒಂದು ಭಾಗ, ವರ್ಗ, ಜಾತಿ, ವರ್ಣಗಳಲ್ಲಿ ತಾತ್ಕಾಲಿಕವಾಗಿಯಾದರೂ ಬೇರೆಯಾಗುವ ಜನ ಸಂಸ್ಕೃತಿಯಲ್ಲಿ ಒಟ್ಟಿಗೆ ಸೇರುತ್ತಾರೆ. ಜಾನಪದ ಎಲ್ಲ ವರ್ಗಗಳಲ್ಲಿ ಕಂಡುಬಂದರೂ ಅದು ಯಾವುದೇ ವರ್ಗಕ್ಕೆ ಸೀಮಿತವಾದುದಲ್ಲ. ಅದು ಎಲ್ಲರ ಮಧ್ಯ ಸರ್ವ ಸಾಧಾರಣವಾಗಿ ಇರುವಂತಹದ್ದು. ಕೆಲವು ಸಾಂಧರ್ಭಿಕ ವ್ಯತ್ಯಾಸಗಳನ್ನು ಬಿಟ್ಟರೆ ಮಾನವರಲ್ಲಿ ಒಟ್ಟಾಗಿ ಅನುಸರಿಸುವ ಆಚರಿಸುವ ನಡವಳಿಕೆ ವಿಚಾರ ಆಚಾರಗಳಿವೆ.

ಜನಪದರು ಹಗಲಿರುಳೂ ಹೊಲಗದ್ದೆಗಳಲ್ಲಿ ದುಡಿಯುತ್ತಲೇ ಜೀವನವನ್ನು ಸಾಣೆ ಕಲ್ಲಿನಂತೆ ಸವೆಸುತ್ತಾರಾದರೂ, ಈ ಲೋಕದ ಸಹವಾಸ ಸಾಕೆಂದು ಬದುಕಿನ ಬಗ್ಗೆ ನಕಾರಾತ್ಮಕ ದೃಷ್ಟಿ ಬೆಳೆಸಿಕೊಂಡವರಲ್ಲ. ದನಕರುಗಳನ್ನು ಮಕ್ಕಳಂತೆ ಪೋಷಿಸುವರು. ಯಾವ್ಯಾವ ಕಾಲಕ್ಕೆ ಯಾವ್ಯಾವ ಬಗೆಯ ತಿಂಡಿ ತಿನಿಸು ಉಪಚಾರಗಳನ್ನು ಮಾಡಬೇಕು. ಕೃಷಿಯಲ್ಲಿ ಯಾವ ಬೆಳೆಗೆ ಹೇಗೆ ಗೊಬ್ಬರ ಕೊಡಬೇಕು ಎಂಬಿತ್ಯಾದಿ ವಿಚಾರಗಳು ಮತ್ತು ಬಂಧುಬಳಗದವರನ್ನು ಹೇಗೆ ಉಪಚರಿಸಬೇಕೆಂಬ ವಿವೇಕವನ್ನು ನಿಸರ್ಗದಿಂದಲೇ ಕಲಿತಿರುತ್ತೀರಿ.

ಪ್ರಕೃತಿಯ ಆರಾಧಕರಾದ ಜನಪದರು ಭೂಮಿ, ಆಕಾಶ, ನೀರು, ಗಾಳಿ ಮತ್ತು ಬೆಂಕಿಯಷ್ಟೆ ಪವಿತ್ರವಾದುದು ಕಾಡು ಎಂದು ನಂಬಿದವರು. ಇವರ ಜೀವನಶೈಲಿ, ಸರಳ, ನೇರ, ಸ್ವಷ್ಟ ಹಾಗೂ ಕಾಡು ಮತ್ತು ಕೃಷಿಯಲ್ಲಿ ದೇವರನ್ನು ಕಂಡವರು. ಆಹಾರ ಉತ್ಪಾದನೆಯ ಪ್ರಕ್ರಿಯೆಯಲ್ಲಿ ಕೃಷಿಯೇ ಪ್ರಮುಖವಾದುದು. ಗಂಡಸು ಭೂಮಿ ಉಳುಮೆ ಮಾಡಬಲ್ಲ, ಗಾಡಿ ಹೊಡೆಯಬಲ್ಲ. ಆದರೆ ಬೀಜ ಬಿತ್ತುವವಳು ಮಕ್ಕಳ ಲಾಲನೆ ಪಾಲನೆ ಮಾಡುವಳು. ದನಕರು ನೀರು ನಿಡೆ ನೋಡಿ, ಅಡಿಗೆ ಮಾಡಿ ಗದ್ದೆಯಲ್ಲಿ ಉಳುಮೆ ಮಾಡುವ ಗಂಡನಿಗೆ ಉಣಬಡಿಸಿ, ತದನಂತರ ಪೈರು ಪಚ್ಚೆಯ ನಿಗಾ ನೋಡಿ ಬೆಳೆಯ ಕಳೆ ಕಿತ್ತು ಸಂಜೆ ಹೊತ್ತಿನವರೆಗೂ ಗಂಡಸಿನ ಸಮಾನವೇ ದುಡಿದು, ಮುಸ್ಸಂಜೆಗೆ ಮನೆಯಲ್ಲಿ ಎದುರಾಗುವ ಎಲ್ಲಾ ಸಮಸ್ಯೆಗಳು ಗರತಿಯ ಸುತ್ತಲೇ ಗಿರಕಿ ಹೊಡೆಯುತ್ತವೆ.

ಕೃಷಿಯಲ್ಲಿ ಸಂಪೂರ್ಣ ತನ್ನನ್ನು ತೊಡಗಿಸಿಕೊಂಡಿದ್ದರಿಂದ ಕಥೆ, ಗಾದೆ, ಒಗಟು ಕಾವ್ಯಗಳಲ್ಲೆಲ್ಲಾ ಬೆಳೆಗಳನ್ನು ಕುರಿತ ವಿಚಾರಗಳು ಬರುತ್ತವೆ. ಅವೆಲ್ಲವನ್ನು ಇಲ್ಲಿ ಪ್ರಸ್ತಾಪಿಸದೇ ಒಗಟು ಮತ್ತು ಗಾದೆ ಪ್ರಕಾರದಲ್ಲಿನ ಒಂದೆರಡು ಚಿತ್ರಣಗಳನ್ನು ಮಾತ್ರ ನೀಡಲಾಗಿದೆ.

***ಹೋಗುವಾಗ ಮಾವಿನ ತೋಟ***

***ಬರುವಾಗ ಬರೀ ತೋಟ***

ಬೆಳ್ಳಗೆ ಅರಳಿ ನಿಂತ ಹತ್ತಿ ಹೊಲದ ದೃಶ್ಯ ನೋಡಲು ಕಣ್ಣಿಗೊಂದು ಹಬ್ಬ, ಹತ್ತಿಯನ್ನು ಬಿಡಿಸಲು ಹೋಗುವಾಗ ಬಿಳಿಯ ಮಾವಿನ ತೋಟವಾಗಿ ಕಂಡದ್ದು, ಹತ್ತಿಯನ್ನೆಲ್ಲಾ ಬಿಡಿಸಿಕೊಂಡು ಹಿಂದಿರುಗಿ ಬರುವಾಗ ನೋಡಿದರೆ, ಬರಿಯ ಬೊಕ್ಕ ತಲೆಯಾಗಿ ಕಾಣುವುದನ್ನು ಇದು ಮಾರ್ಮಿಕವಾಗಿ ಸೂಚಿಸಿದೆ.

***ಅತ್ತೂರು ಹೆಣ್ಣೀಗೆ ನೆತ್ತೀಲಿ ಬಸಿರು***

***ಕಿತ್ತೂತು ಹೆಣ್ಣೀಗೆ ಮ್ಯಾತೇಲಿ ಬಸಿರು***

***ಮಂಡೆ ಬಸಿರು ಮೊಳ ಕೈಯಲ್ಲಿ***

ನವಣೆ, ಜೋಳ, ರಾಗಿ ಬೆಳೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದ ರೈತನ ಮನಸ್ಸು ಅವುಗಳನ್ನು ಹೆಣ್ಣೆಂದು ಬಗೆದಿವೆ. ಅವು ಗರ್ಭಧರಿಸುವ ತೆನೆಯೊಡೆದು ಹೊರಬರುವ ವಿಧಾನವನ್ನು ವಿವರಿಸಿದೆ. ರಾಗಿಯ ಪೈರು ನೆತ್ತಿಯಲ್ಲಿ ಹೊಡೆ ಬಂದರೆ, ಕಾಳು ಸಮೃದ್ಧವಾಗುವುದಿಲ್ಲ, ಒಂದೇ ತೆನೆಯಾಗುತ್ತದೆ. ಈ ಕಾರಣಕ್ಕೆ ರಾಗಿ ಗರ್ಭಧರಿಸುವ ಮುನ್ನ ಎರಡು ಮೂರು ಸಾರಿ ದನ ಬಿಟ್ಟು ಮೇಯಿಸಿ, ಮಂಡೆ ಬೋಳಾಗುವಂತೆ ಮಾಡುತ್ತಾರೆ. ಆದ್ದರಿಂದ, ಅದನ್ನು ಮಂಡೆ ಬಸಿರು ಎನ್ನಲಾಗಿದೆ.

***ಅಕ್ಕ ಅಕ್ಕ ಗಿಡ ನೋಡೆ***

***ಗಿಡದ ತುಂಬಾ ಕಾಯಿ ನೋಡೆ***

***ಕಾಯಿ ತಿಂದೋರ ಬಾಯಿ ನೋಡೆ (ಏಲಕ್ಕಿ)***

***ಹಗ್ಗ ಹಾಸಿದೆ ಕೋಣ ಮಲಗಿದೆ (ಕುಂಬಳಕಾಯಿ)***

ಜನಪದರಲ್ಲಿ ವ್ಯಕ್ತವಾಗುವ ಜೀವನದೃಷ್ಟಿ, ಕಾಯಕನಿಷ್ಠೆ, ಭೂಮಿಗೆ ಬದ್ಧವಾದದ್ದು. ವೈವಿಧ್ಯಪೂರ್ಣ ಸಂಪ್ರದಾಯ ಆಚರಣೆಗಳಲ್ಲಿ ಸಂಸ್ಕೃತಿ ಸಂಪನ್ನ ಬದುಕಿದೆ. ಹಾಗಾಗಿಯೇ ನಮ್ಮ ರೈತ ಹೊನ್ನ ಬಿತ್ತೋವು ಹೊಲಕೆಲ್ಲಾ ಎನ್ನುವ ಮಾತಿನಲ್ಲಿ ಎಂಥ ಜೀವೋತ್ಪತ್ತಿಯಿದೆ ? ಜಾನಪದ ಸಂಸ್ಕೃತಿ ಇಡೀ ಬದುಕನ್ನು ತಬ್ಬಿದೆ. ಇಂಥ ಸಾಂಸ್ಕೃತಿಕ ಕಣಜವಾಗಿದ್ದ ಮಹಿಳೆಯ ಕೌಟುಂಬಿಕ ಜೀವನದಲ್ಲಿ ಏರು ಪೇರುಗಳಾಗಿವೆ. ಹದಿಬದೆಯ ಧರ್ಮದಲ್ಲಿ ಸಂಚಿ ಹೊನ್ನಮ್ಮ. 'ಹೆಣ್ಣು ಹೆಣ್ಣೆಂದೇಕೆ ಬೀಲುಗಳೆವರು ಕಣ್ಣು ಕಾಣದ ಗಾವಿಲರು' ಎಂದರು. ಹೆಣ್ಣು ಮಾಯೆಯಲ್ಲ ಮನದ ಮಂದಣ ಆಸೆಯೇ ಮಾಯೆಕಾಣ ಎಂದ ಜನಪದರು. ಹೆಣ್ಣಿಲ್ಲದ ಸಂಸಾರ ಕಣ್ಣಿಲ್ಲದವನ ಬಾಳುವೆಯಂತೆ, ಕೃಷಿ ಬದುಕಿನಲ್ಲಿ ದುಡಿಯುವ ಗಂಡಸು ಯಜಮಾನನಾದ, ಹೆಣ್ಣಿನ ಗೃಹಕೃತ್ಯದ ಕೆಲಸ ನೋಡದೆ ಹೊಲದಲ್ಲಿ ಬೆಳೆದ ಬೆಳೆ ಮಾತ್ರ ನೋಡುವಂತಾಯಿತು. ಅವಳ ತಾಳ್ಮೆ, ಸಹನೆ, ಸಮಯಪ್ರಜ್ಞೆ, ಅಡುಗೆ–ಉಡುಗೆ, ಮಕ್ಕಳ ಲಾಲನೆ ಬಂಧುತ್ವ ಇತ್ಯಾದಿಗಳಿಗೆಲ್ಲ ಈ ಪರಂಪರೆ ಬೆಲೆಯಿಲ್ಲದಂತೆ ಮಾಡಿದೆ. ಹೆಣ್ಣು ನಿರ್ಜೀವ ಆಟಿಕೆಯಲ್ಲ, ಬಾಯಿ ಸತ್ತವಳಲ್ಲ. ಮಾನವತೆಯಲ್ಲಿ ನೆಮ್ಮದಿ ಕಾಣಲು, ಸಮಾನತೆ ಸೋದರತೆ ಪ್ರೀತಿ ಬಂಧುತ್ವ ಬದುಕಿನಲ್ಲಿ ಕಾಣಬೇಕಾದರೆ ಪ್ರತಿಯೊಬ್ಬರ ಬಾಳಿನಲ್ಲಿ ಹೆಣ್ಣು ಗೃಹಲಕ್ಷ್ಮಿಯಾಗಿ ಇರಲೇಬೇಕೆಂಬುದನ್ನು ಪ್ರತಿಯೊಬ್ಬರು ಮನಗಾಣಲೇಬೇಕು. ಕೃಷಿ ಸಂಸ್ಕೃತಿಯೆಂಬುದೇ ಸ್ತ್ರೀ ಸಮುದಾಯದ ಕರುಳ ಮಿಡಿತಗಳ ಸಂಬಂಧಗಳ ಸ್ವರೂಪವನ್ನು ಕೃಷಿ ಮಹಿಳೆಯ ನೆಲೆಯಿಂದ ಇಂದು ಪುನರ್ ವ್ಯಾಖ್ಯಾನಿಸುವ ಪುನರ್ ಮೌಲ್ಯಮಾಪನಕ್ಕೊಳಪಡಿಸುವ ಮಹತ್ವದ ಕೆಲಸ ಇಂದು ಆಗಬೇಕಾಗಿದೆ.

ಆದ್ದರಿಂದಲೇ ಒಂದು ಸಾಹಿತ್ಯ ಕೃತಿಯ ಅಧ್ಯಯನವೆಂಬುದು ಅಲ್ಲಿ ಹುದುಗಿರುವ ವ್ಯಕ್ತಿಶೋಧ, ಸಮಾಜಶೋಧ, ಮೌಲ್ಯಾದರ್ಶ ಶೋಧ ಮತ್ತು ಸೌಂದರ್ಯ ಶೋಧದೊಂದಿಗೆ ವೈಜ್ಞಾನಿಕ ಮನೋದೃಷ್ಟಿ ಅತ್ಯಂತ ಮಹತ್ವದ್ದಾಗಿ ತೋರುತ್ತದೆ. ವೈಜ್ಞಾನಿಕ ಮನೋದೃಷ್ಟಿ ಪ್ರಕಾರ ಯಾವುದೇ ನಂಬಿಕೆ ಅಥವಾ ಅಭಿಪ್ರಾಯ ಪ್ರಾಯೋಗಿಕ ಪುರಾವೆಗಳ ಆಧಾರದ ಮೇಲೆ ನಿಂತಿರಬೇಕು.

ಪ್ರಾಯೋಗಿಕ ಪುರಾವೆಗಳು ವೈಜ್ಞಾನಿಕ ಸಿದ್ಧಾಂತಗಳನ್ನು ದೃಢೀಕರಿಸುತ್ತವೆ. ಇಂತಹ ಸಿದ್ಧಾಂತಗಳು ವಿಜ್ಞಾನಿಗಳಿಂದ ಮನ್ನಣೆ ಪಡೆಯುತ್ತವೆ. ನಿಸರ್ಗದಲ್ಲಾಗುವ ಎಲ್ಲ ಕ್ರಿಯೆಗಳ ಬಗ್ಗೆ ತಿಳಿದುಕೊಳ್ಳಲು ಸಹಾಯಕವಾಗುತ್ತವೆ. ಸಿದ್ಧಾಂತಗಳಲ್ಲಿರುವ ನ್ಯೂನತೆಗಳನ್ನು ತೆಗೆದುಹಾಕಲು ಮತ್ತು ಹೊಸ ವಿಚಾರಗಳನ್ನು ಹುಟ್ಟುಹಾಕಲು ವಿಜ್ಞಾನ ಲೋಕದಲ್ಲಿ ಅವಕಾಶವಿದೆ. ಪುರಾವೆಗಳ ಮೇಲೆ ಗಟ್ಟಿಯಾಗಿ ನಿಂತ ಸಿದ್ಧಾಂತಗಳು, ಸತ್ಯ ಮತ್ತು ಸೌಂದರ್ಯ ಎರಡನ್ನೂ ಒಳಗೊಂಡಿರುತ್ತವೆ.

**ಆಕರ/ಪರಾಮರ್ಶನ ಗ್ರಂಥಗಳು**


- ಹಳಕಟ್ಟಿ ಫ.ಗು. (1936). *ಉರಿಲಿಂಗಪೆದ್ದಿಯ ವಚನಗಳು.* ಶಿವಾನುಭವ ಗ್ರಂಥಮಾಲೆ.
- ಹಿರೇಮಠ ಆರ್.ಸಿ. (ಸಂ.) (1965). *ಚೆನ್ನಬಸವಣ್ಣನವರ ವಚನಗಳು.* ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ.
- ಹಿರೇಮಠ ಆರ್.ಸಿ. (1979). *ಅಲ್ಲಮ ಪ್ರಭುದೇವರ ವಚನಗಳು.* ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ.
- ಹಿರೇಮಲ್ಲೂರು ಈಶ್ವರನ್. (1997). *ಬಸವಣ್ಣ ಹಾಗೂ ಲಿಂಗಾಯತ ಧರ್ಮ.* ಪ್ರಿಯದರ್ಶಿನಿ ಪ್ರಕಾಶನ.
- ನಾರಾಯಣ ಪಿ.ವಿ. (1994). *ವಚನ ಪರಿಸರ.* ತಂಗಾಳಿ.
- ಸಂಗಮೇಶ ಎಸ್. ಗಣಿ. (2020). ವಚನ ಸಾಹಿತ್ಯ ಮತ್ತು ಜಾನಪದ. *ಆಲೋಚನೆ,* https://www.alochane.com/
- ತಿಪ್ಪೇರುದ್ರಸ್ವಾಮಿ ಎಚ್. (1963). *ಶರಣರ ಅನುಭಾವ ಸಾಹಿತ್ಯ.* ಡಿ.ವಿ.ಕೆ. ಮೂರ್ತಿ.
- ತಿಪ್ಪೇರುದ್ರಸ್ವಾಮಿ ಎಚ್. (1969). *ವಚನಗಳಲ್ಲಿ ವೀರಶೈವಧರ್ಮ.* ಡಿ.ವಿ.ಕೆ. ಮೂರ್ತಿ.
- ತಿಪ್ಪೇರುದ್ರಸ್ವಾಮಿ. (1995). ಬಸವೇಶ್ವರ ವಚನ ದೀಪಿಕೆ. ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ.